ಅಲ್ಲಿ ಹೋಗಿ ಮಾತನಾಡಲಿಕ್ಕೆ ಆಗುವುದಿಲ್ಲ. ನಾನು ಈ ಸದನದ ಮೂಲಕವೇ ಹೇಳುತ್ತಿದ್ದೇನೆ. ಇದು ರೈತರ ಪ್ರಶ್ನೆ, ರೈತರಿಗೆ ಧಕ್ಕೆಯಾದರೆ ನಾನು ಪಕ್ಷ ನೋಡುವುದಿಲ್ಲ. ಪಕ್ಷಕ್ಕೆ ವಿರುದ್ಧವಾಗಿ ಕೆಲಸ ಮಾಡುವುದಕ್ಕೆ ತಯಾರಾಗಿದ್ದೇನೆ ಎನ್ನುವ ಎಚ್ಚರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತಿದ್ದೇನೆ. ಬಂಡವಾಳಶಾಹಿಗಳಿಗೆ ಮಾರುವುದು ಬೇಡ. ನಿಮಗೂ ಎಚ್ಚರಿಕೆ ಕೊಡುತ್ತಿದ್ದೇನೆ. ಇದು ರೈತರ ಸಮಸ್ಯೆ ಇದನ್ನು ಅರ್ಥಮಾಡಿಕೊಂಡು ಬಗೆಹರಿಸಬೇಕು. ನಾಳೆ ನೀವು ಮಂಡ್ಯ ಜಿಲ್ಲೆಯಲ್ಲಿ ಬಾವುಟ ಹಾರಿಸಿಕೊಂಡು ಓಡಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಚಳವಳಿಯನ್ನು ಮಾಡುವುದಕ್ಕೆ ಅವಕಾಶ ಕೊಡಬೇಡಿ. ನಮಗೆ ಚಳವಳಿಮಾಡಿ ಅಭ್ಯಾಸವಿದೆ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ. —ಅವರು ಏನು ಹೇಳಿದ್ದಾರೆಂದರೆ ಸರ್ಕಾರದ ಅಭಿಪ್ರಾಯ ಭೇದವೆಂದು ಭಾವಿಸಿ ರೈತರ ಪರವಾಗಿ ತಾಲ್ಲೂಕಿನ ಪರವಾಗಿ ವಿಶ್ಲೇಷಣೆ ಮಾಡಿದರು. ವಿವರಣೆಯನ್ನು ಕೊಡುತ್ತಾ ಜಾತಿಯ ಬಗ್ಗೆ ಕೂಡ ಹೇಳಿದರು. ಮಹಾಲಿಂಗಂ ಅವರಿಗೆ ತಿರುಗಿ ಬಿದ್ದಿರುವವನು ಒಕ್ಕಲಿಗ ಜಾತಿಯವನು. ಅವರೆಲ್ಲಾ ಒಂದೇ ಕಡೆ ಇದ್ದರು, ಮಹಾಲಿಂಗಂ ಅವರಿಗೆ ತಿರುಗಿ ಬಿದ್ದಿರುವವ ಚಂದಪ್ಪ ಎಂಬುವನ್ನು ನಿಮ್ಮ ಸ್ನೇಹಿತರು, ಈಗ ನಿಮ್ಮನ್ನು ಬಿಟ್ಟಿರಬಹುದು ಬೇರೆ ಅಪಾರ್ಥದಿಂದ ನಾನು ಹೇಳುವುದಿಲ್ಲ. ಈಗ ಅವರೇ ತಿರುಗಿ ಬಿದ್ದಿದ್ದಾರೆ. ಮೊದಲ ರಾಜಕೀಯವೇ ಇದೆ. ನಿಮಗೆ ನಾನು ಸಪೋರ್ಟ್ ಮಾಡುತ್ತಿದ್ದೇನೆ, ಇದರಲ್ಲಿ ಪಕ್ಷ ಉಳಿದಿಲ್ಲ. ಚಂದಪ್ಪ ನನಗೆ ನೆಂಟ ಇಲ್ಲ, ನಮ್ಮ ಜಾತಿಯವನು. ಅವನ ಪರವಾಗಿ ಕೆಲಸ ಮಾತನಾಡುವುದಕ್ಕೆ ನಾವು ಸಿದ್ಧರಿಲ್ಲ. ಮದ್ದೂರಿನಲ್ಲಿ ಉಪ ಚುನಾವಣೆಯಾಯಿತು. ಆಗ ನಾವು ಹಣ ತೆಗೆದುಕೊಂಡಿಲ್ಲ. ಆಗ ನಾನು ಪಕ್ಷದ ಅಧ್ಯಕ್ಷನಾಗಿದ್ದೆ, ಹಣ ತೆಗೆದುಕೊಳ್ಳುವುದಿಲ್ಲವೆಂದು ನಾನು ನೇರವಾಗಿ ಹೇಳಿದ್ದೇನೆ ನಾನು ಯಾವ ದಾಕ್ಷಿಣ್ಯಕ್ಕೂ ಬಗ್ಗಲಾಗಿಲ್ಲ. ಮಾನ್ಯ ಮಾದೇಗೌಡರು ಹೇಳಿದಹಾಗೆ ನಮ್ಮ ಕಡೆ ಬಂದಾಗ ನನ್ನ ಪಕ್ಷ ಎಂದು ಹೇಳುತ್ತಾರೆ, ಅಲ್ಲಿ ಹೋದರೆ ಕಾಂಗ್ರೆಸ್ ಎಂದು ಹೇಳುತ್ತಾರೆ ಅವರಿಗೆ ರಾಜಕೀಯ ಪ್ರಭಾವವಿದೆ. ಅಲ್ಲಿ ಒಂದು ತರಹ ಇರತ್ತಾರೆ, ಇಲ್ಲಿ ಒಂದು ತರಹ ಇರುತ್ತಾರೆ ಅದನ್ನು ಒಪ್ಪಿಕೊಳ್ಳಬಹುದು. ಆದರೆ ಇಷ್ಟು ಹೇಳುತ್ತೇನೆ. ರೈತರಿಗೆ ಅಪಾಯವಾಗದ ರೀತಿಯಲ್ಲಿ ನಿರ್ಣಯವನ್ನು ಸರ್ಕಾರ ಕೈಗೊಳ್ಳಬೇಕು. ಮಾನ್ಯ ಕೈಗಾರಿಕಾ ಸಚಿವರು ಅದರ ಬಗ್ಗೆ ನಾಳೆ ಉತ್ತರ ಕೊಡುತ್ತಾರೆ.

ನಿಯಮ 334ರ ಮೇರೆಗೆ

ಭದ್ರಾ ಜಲಾಶಯದಿಂದ ಅಚ್ಚುಕಟ್ಟುದಾರರಿಗೆ ನೀರನ್ನೊದಗಿಸುವುದು.

ಶ್ರೀ ಕೆ. ಎಚ್. ಶ್ರೀನಿವಾಸ್. —ನಿಯಮ ೩೩೪ರ ಕೆಳಗೆ ಒಂದು ವಿಷಯವನ್ನು ನಾನು ಪ್ರಸ್ತಾಪ ಬೆಳಿಗ್ಗೆ ಮಾಡಬೇಕಾಗಿತ್ತು. ಅದನ್ನು ಈಗ ತಮ್ಮ ಅನುಮತಿಯನ್ನು ಪಡೆದು ಪ್ರಸ್ತಾಪ ಮಾಡುತ್ತಿದ್ದೇನೆ. ಭದ್ರಾ ಯೋಜನೆಯ ಅಚ್ಚುಕಟ್ಟಿನಿಂದ ಈ ಬಾರಿ ಬೇಸಿಗೆ ಬೆಳೆಗೆ ನೀರನ್ನು ಒದಗಿಸುವ ವಿಚಾರದಲ್ಲಿ ರೈತರ ಹಾಗೂ ಕಾಡಾ ಅಧ್ಯಕ್ಷರು ಅಧಿಕಾರಿಗಳ ಮಧ್ಯೆ ವಿವಾದ ಉಂಟಾಗಿದ್ದು. ರೈತರು ಲಕ್ಕವಳ್ಳಿಗೆ ಜಾತಾ ಹೋಗಿ ಪ್ರತಿಭಟನೆ ನಡೆಸಿದ ವಿಚಾರದಲ್ಲಿ ಹಿಂದೆ ನೀರಾವರಿ ಸಚಿವರ ಗಮನ ಸೆಳೆದಾಗ ಅವರು ಭದ್ರಾ ಸಲಹಾ ಸಮಿತಿಯ ಸಭೆಯನ್ನು ಬೆಂಗಳೂರಿನಲ್ಲಿ ತಮ್ಮ ಸಮ್ಮುಖದಲ್ಲೇ ತುರ್ತಾಗಿ ಕರೆಯುವುದಾಗಿ ಭರವಸೆ ನೀಡಿದ್ದು, ಸದರಿ ಸಭೆಯನ್ನು ದಿನಾಂಕ ೪-೨-೧೯೯೬ರಂದು ಸಂಜೆ ಕರೆದು ಸುಮಾರು ೪ ತಾಸುಗಳಕಾಲ ಸುದೀರ್ಘವಾಗಿ ಸಂಬಂಧಿಸಿದ ಎಲ್ಲರ ಅಭಿಪ್ರಾಯಗಳನ್ನು ಕೇಳಿ ಚರ್ಚಿಸಿರುವುದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ ನಿನ್ನೆ ದಿನದ ಸಭೆಯಲ್ಲಿ ಚರ್ಚೆಯ ನಂತರ ಒಂದು ಹೇಳಿಕೆಯ ಮೂಲಕ ಮಾನ್ಯ ನೀರಾವರಿ ಸಚಿವರೇ ಅಂತಿಮ ತೀರ್ಮಾನವನ್ನು ಪ್ರಕಟಿಸಬೇಕೆಂದು. ಹಾಗೂ ಬೇರೆ ಯಾರೂ ಈ ಬಗ್ಗೆ ಹೇಳಿಕೆ ನೀಡಿ ಗೊಂದಲಕ್ಕೆ ಅವಕಾಶ ಮಾಡಬಾರದೆಂದೂ, ಒಮ್ಮತದಿಂದ ಒಪ್ಪಿಗೆಯಾಗಿರುತ್ತದೆ. ವಿಚಾರವು ತುರ್ತು ಸ್ವರೂಪದ್ದಾಗಿದ್ದು. ಬೇಸಿಗೆ ಬೆಳೆಗೆ ನೀರನ್ನು ಯಾವ ಕ್ರಮದಲ್ಲಿ ಬಿಡುಗಡೆ ಮಾಡಲಾಗುವುದೆಂಬುದು ರೈತರ ಆಳಿನ ಉಳಿವಿನ ಪ್ರಶ್ನೆಯಾಗಿರುವುದರಿಂದ ಮಾನ್ಯ ನೀರಾವರಿ ಸಚಿವರು ತಮ್ಮ ನಿರ್ಧಾರವನ್ನು ತಕ್ಷಣ ಪ್ರಕಟಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಉಪಾಧ್ಯಕ್ಷರೇ, ಈ ಹಿಂದೆ ಸದನದಲ್ಲಿ ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಎಚ್. ಶ್ರೀನಿವಾಸ್‌ರವರು ಭದ್ರಾ ಜಲಾಶಯದಲ್ಲಿರತಕ್ಕ ನೀರನ್ನು ಉಪಯೋಗ ಮಾಡಿ ಬೇಸಿಗೆ ಬೆಳೆಗೆ ನೀರನ್ನು ಕೊಡುವುದರ ಬಗ್ಗೆ ಸಿಸಿಳರಲ್ಲೇ ಸರ್ಕಾರದ ಗಮನವನ್ನು ಸೆಳೆದಿದ್ದರು ಅಂದು ನಾನು ಈ ಸದನದಲ್ಲೇ ಆಶ್ವಾಸನೆ ಕೊಟ್ಟಿದ್ದೆ. ಈ ಒಂದು ವಿಷಯದ ಬಗ್ಗೆ ಅತಿ ಜರೂರಾಗಿ ಸಭೆಯನ್ನು ಬೆಂಗಳೂರಿನಲ್ಲಿ ನನ್ನ ಕಛೇರಿಯಲ್ಲೇ ಕರೆದು ನಿರ್ಣಯ ತೆಗೆದುಕೊಳ್ಳುತ್ತೇನೆಂದು ಈ ಸದನದಲ್ಲಿ ಅವರಿಗೆ ಆಶ್ವಾಸನೆ ಕೊಟ್ಟಿದ್ದೆ. ಅದೇ ರೀತಿ ನಿನ್ನೆ ಸಭೆಯನ್ನು ಕರೆದಿದ್ದೆ. ಆ ಸಭೆಯಲ್ಲಿ ಜಿಲ್ಲಾ ಮಂತ್ರಿಗಳು, ಲೋಕಸಭಾ ಸದಸ್ಯರುಗಳು, ಶಾಸನ ಸಭಾ ಸದಸ್ಯರುಗಳು, ಕಾಡಾ ಅಧ್ಯಕ್ಷರು, ನೀರಾವರಿ ಸಲಹಾ ಸಮಿತಿಯ ಸದಸ್ಯರುಗಳು, ರೈತ ಸಂಘದ ಕಾರ್ಯದರ್ಶಿಯವರಾದ ಶ್ರೀಮಾನ್ ಸುಂದರೇಶನ್‌ರವರು, ರೈತ ಸಂಘದ ಸಮನ್ವಯ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಶಂಕರಿಕೊಪ್ಪ ಅವರು, ನೀರಾವರಿ ಸಲಹಾ ಮಂಡಲಿಯ ಅಧ್ಯಕ್ಷರಾದ ಶ್ರೀಮಾನ್ ಡಿ. ಬಿ. ಚಂದ್ರೇಗೌಡರು, ಹಾಗೂ ಇನ್ನೊಂದು ರೈತ ಸಂಘದ ಅಧ್ಯಕ್ಷರಾದ ಶ್ರೀಮಾನ್ ನರಸಿಂಹಪ್ಪರವರು, ಮತ್ತು ಅಚ್ಚುಕಟ್ಟು ಪ್ರದೇಶದ ಪ್ರಮುಖ ರೈತರು, ಇಷ್ಟೂ ಜನರು ಸೇರಿದಂತಹ ಸಭೆಯಲ್ಲಿ ಸುಮಾರು ದೀರ್ಘವಾಗಿ ೪-೫ ಗಂಟೆಗಳ ಚರ್ಚೆಯಾಗಿ ಭದ್ರಾ ಜಲಾಶಯದಲ್ಲಿರತಕ್ಕ ೨೨ ಟಿ. ಎಂ. ಸಿ. ನೀರಿನಲ್ಲಿ ನಾಲ್ಕೂವರೆ ಟಿ. ಎಂ. ಸಿ. ಅಷ್ಟು ಕುಂದಾ ನಾಲಾ ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿರುವುದರಿಂದ, ಅಷ್ಟು ನೀರನ್ನು ಉಳಿಸಿಕೊಂಡು ಉಳಿದ ಹದಿನೇಳುವರೆ ಟಿ. ಎಂ. ಸಿ. ಅಷ್ಟು ನೀರನ್ನು ಕೊಡುತ್ತಿದ್ದಾರೆ. ಅಂದರೆ ಅದಕ್ಕೆ ಳ ವಾಟರಿಂಗ್ ಅಂತ ಹೇಳುತ್ತೇವೆ. ಇದನ್ನು ಅಫ್ ಅಂಡ್ ಆನ್ ಸಿಸ್ಟಂ ಪ್ರಕಾರ ಕೊಡುವಕ್ಕಂತಹದ್ದೆಂತಹದ್ದೂ ತೀರ್ಮಾನ ಮಾಡಿದ್ದೇವೆ. ಆ ರೀತಿ ನೀರನ್ನು ಕೊಡುವಾಗ ಯಾರೂ ಬತ್ತದ ಬೆಳೆಯನ್ನು ಬೆಳೆಯಕೂಡದೆಂತಲೂ ಅರೆ ಖುಷ್ಕಿ ಬೇಸಾಯಕ್ಕೆ ನೀರನ್ನು ಕೊಡಬೇಕೆಂತಲೂ ಸರ್ವಾನುಮತದ ನಿರ್ಣಯವಾಯಿತು. ಅದು ೧೦-೫-೧೯೮೬ರವರೆಗೆ ಜಲಾಶಯದಲ್ಲಿರತಕ್ಕ ಕೊನೇ ಹನಿ ಇರುವರೆಗೂ ಅದರಲ್ಲಿ ಕ್ಯಾರಿ ಓವರ್ ಪ್ರಶ್ನೆನೇ ಇಲ್ಲ, ಅವರಿಗೆ ನೀರನ್ನು ಕೊಟ್ಟು ಅಲ್ಲಿ ಖುಷ್ಕಿ ಬೆಳೆಯನ್ನು ಉಳಿಸಬೇಕೆಂದೂ ಕೂಡ ನಿರ್ಣಯವಾಗಿದೆ; ಈ ರೀತಿಯಂ ಸರ್ವಾನುಮತದ ನಿರ್ಣಯವಾಗುವುದಕ್ಕೆ ಸಹಕರಿಸಿದಂತಹ ಆ ಸಭೆಯಲ್ಲಿದ್ದಂತಹ ಎಲ್ಲ ಸನ್ಮಾನ್ಯ ಮುಖಂಡರುಗಳಿಗೂ ಹಾಗೂ ರಾಜಕೀಯ ಮುಖಂಡರುಗಳಿಗೂ, ರೈತ ಮುಖಂಡರುಗಳಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಒಂದು ನಿರ್ಣಯ ರೈತರ ಒಳಿತಿಗೋಸ್ಕರ ಎಂಬುದನ್ನು ತಿಳಿದುಕೊಳ್ಳಬೇಕು. ಸಮಗ್ರವಾಗಿ ಬರಲಿ ಜನಗಳಿಗೆ ಅನುಕೂಲವಾಗಲಿ ಕೇವಲ ಳ ಜನ ಬತ್ತ ಬೆಳೆಯುವುದಕ್ಕೆ ಬದಲಾಗಿ ಹೆಚ್ಚು ಜನಗಳಿಗೆ ಉಪಯೋಗವಾಗಿ ಹಾಕಿದಂತಹ ಬೆಳ ಬರಬೇಕೂ. ಆದ ಕೊಳ್ಳಸ್ಕರ ಳ ಜನ ನೀರನ್ನು ೧೮-೬ ದಿನಗಳ ಅಂತ್ಯದಲ್ಲಿ ಬಿಡತಕ್ಕಂತಹ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದು ೧೦-೫-೧೯೮೬ರವರೆಗೆ ಕೊಡುವುದಕ್ಕೆ ಸಾಧ್ಯತೆ ಇದೆ. ಒಂದು ವೇಳೆ ನೀರು ಇನ್ನೂ ಉಳಿದರೆ ಅದನ್ನು ಅವರೇ ಉಪಯೋಗ ಮಾಡಿಕೊಳ್ಳಬಹುದು. ಈ ಒಂದೂ ಪ್ರಮುಖ ಹೇಳಿಕೆಯನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ನಿರ್ಣಯವನ್ನು ಕಾರ್ಯಗತ ಮಾಡಲು ಭದ್ರಾ ಜಲಾಶಯದ ಹಿಂಭಾಗದಲ್ಲಿರುವಂತಹ ಎಲ್ಲ ರೈತರು ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಕಾಡಾದ ಅಧಿಕಾರಿಗಳಿಗೆ ತಮ್ಮ ಸಹಕಾರ ನೀಡಬೇಕೆಂದು ಈ ಸದನದ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ.—ಇದೇ ರೀತಿಯ ಹೇಳಿಕೆಯು ತುಂಗ ಭದ್ರಾ ಹೈಲೆವಲ್ ಕೆನಾಲ್ ಬಗ್ಗೆ ಹೇಳಬೇಕಾಗಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ನಾಳೆ ಹೇಳಿಕೆತ್ತೇನೆ.

ಉಪಾಧ್ಯಕ್ಷರು.— ಶ್ರೀ ಅಜ್ಜಿಬಾಳ ಹೆಗಡೆ – ಅಬ್ಸೆಂಟ್.
ಶ್ರೀ ಜಿ. ಎಸ್. ಶಿವನಂಜಪ್ಪ – ಅಬ್ಸೆಂಟ್.
ಶ್ರೀ ಬಿ. ಆರ್. ವೀಲಕಂಠಪ್ಪ – ಅಬ್ಸೆಂಟ್,
ಶ್ರೀ ಚಂದ್ರಕಾಂತ್ ಬೆಲ್ಲದ್ – ಅಬ್ಸೆಂಟ್.